# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 715

ಸದಸ್ಯರ ಹೆಸರು: ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ: 12.07.2023

ಉತ್ತರಿಸುವವರು: ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು

| | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ,ಮಾರುಕಟ್ಟೆಯ ಅಧಿಕಾರಿಗಳು 569 ಜನ ರೇಷ್ಮೆ ಬೆಳೆಗಾರರ ಸ್ವಂತ ಬೆಳೆದ ಗೂಡಿನ ವಹಿವಾಟಿನ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:ಹಾಗಿದ್ದಲ್ಲಿ, ದುರುಪಯೋಗ ಪಡಿಸಿಕೊಂಡಿರುವ ಮೊತ್ತವೆಷ್ಟು: 569 ಜನ ರೇಷ್ಮೆ ಬೆಳೆಗಾರರಿಗೆ ಯಾವ ರೀತಿ ಹಣ ಪಾವತಿ ಮಾಡಲಾಗಿದೆ.<br><br>(ವಿವರ ನೀಡುವುದು). | ಸರ್ಕಾರಿ ರೇಷ್ಮೆಗೂಡು ಮಾರುಕಟ್ಟೆ, ರಾಮನಗರ ಇಲ್ಲಿನ ಅಧಿಕಾರಿಗಳಾಗಿದ್ದ ಶ್ರೀಜೆ.ಎಂ.ಮುನ್ನಿಬಸಯ್ಯರವರು 569 ರೇಷ್ಮೆ ಬೆಳೆಗಾರರಿಗೆ ರೂ.2,36,33,801/-(ರೂ.ಎರಡು ಕೋಟಿ ಮೂವತ್ತಾರು ಲಕ್ಷದ ಮೂವತ್ತೂರು ಸಾವಿರದ ಎಂಟುನೂರ ಒಂದು) ಗಳನ್ನು ಪಾವತಿಸದೆ ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಿನಾಂಕ:22.03.2021ರಂದು ಅವರನ್ನು ಸೇವೆಯಿಂದ ಅಮಾನತ್ತು ಮಾಡಿ 569 ರೇಷ್ಮೆ ಬೆಳೆಗಾರರಿಗೆ ಪಾವತಿಸಬೇಕಾಗಿದ್ದ ಮೊತ್ತವನ್ನು ಸದರಿ ಮಾರುಕಟ್ಟೆಗೆ ಪ್ರೋತ್ಸಾಹ ಧನ ವಿತರಣೆಯ ಹಂಚಿಕೆಗಾಗಿ ಬಿಡುಗಡೆ ಮಾಡಿದ್ದ ರೂ.447.07 ಲಕ್ಷಗಳಲ್ಲಿ ಉಳಿದಿದ್ದ 200 ಲಕ್ಷಗಳನ್ನು ರೇಷ್ಮೆ ಬೆಳೆಗಾರರ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲಾಗಿದೆ.<br><br>ಪ್ರೋತ್ಸಾಹ ಧನದಲ್ಲಿ ಬಳಕೆ ಮಾಡಿಕೊಂಡಿದ್ದ ರೂ.ಎರಡು ನೂರು ಲಕ್ಷಗಳಲ್ಲಿ ರೂ.78,59,000/- (ರೂ. ಎಪ್ಪತ್ತೆಂಟು ಲಕ್ಷದ ಐವತ್ತೊಂಬತ್ತು ಸಾವಿರ)ಗಳನ್ನು ದಿನಾಂಕ:05.08.2021ರಂದು ಚೆಕ್ ಸಂಖ್ಯೆ:001227ರಲ್ಲಿ ಜಮೆ ಮಾಡಲಾಗಿದೆ. ಸದರಿ ಅಧಿಕಾರಿಗಳು ಕರ್ತವ್ಯ ನಿರ್ವಹಣೆಯಲ್ಲಿ ಎಸಗಿದ್ದ ಲೋಪದೋಷಗಳನ್ನು ಪತ್ತೆ ಹಚ್ಚಿ ಬರಬೇಕಾದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಕ್ರಮವಹಿಸುತ್ತಿದ್ದು, ಪ್ರಸ್ತುತ ರೂ.13,46,066/-(ರೂ.ಹದಿಮೂರು ಲಕ್ಷದ ನಲವತ್ತಾರು ಸಾವಿರದ ಅರವತ್ತಾರು)ಗಳನ್ನು ಭಾಗೀದಾರರಿಗೆ ಹೆಚ್ಚುವರಿಯಾಗಿ ಪಾವತಿಸಿದ್ದ ಮೊತ್ತವನ್ನು ವಸೂಲಿ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಭಾಗೀದಾರರಿಂದ ಮತ್ತು ಸದರಿ ಅಧಿಕಾರಿಗಳಿಂದ ಹಣ ವಸೂಲಾತಿಗೆ ನಿಯಮಾನುಸಾರ ಎಲ್ಲಾ ಕ್ರಮಗಳನ್ನು ವಹಿಸಲಾಗುತ್ತಿದೆ. |
| (ಆ) | ರಾಜ್ಯದಲ್ಲಿ ರೇಷ್ಮೆ ನೂಲಿನ ಬೆಲೆ ಕುಸಿತದಿಂದ ರಾಜ್ಯದ ರೇಷ್ಮೆ ಬೆಳೆಗಾರರು ಉತ್ಪಾದಿಸಿದ ಗೂಡಿಗೆ ಬೆಲೆ ಕುಸಿತ ಉಂಟಾದಾಗ ಸರ್ಕಾರ ಮಧ್ಯಪ್ರವೇಶಿಸಿ ಪ್ರೋತ್ಸಾಹ ಧನ ನೀಡಲು ಮೀಸಲಿಟ್ಟಿರುವ ಹಣವನ್ನು ತಪ್ಪಿತಸ್ಥ ಅಧಿಕಾರಿಗಳು ಮಾಡಿದ ದುರುಪಯೋಗಕ್ಕೆ ವಿನಿಯೋಗ | ರೇಷ್ಮೆ ಬೆಳೆಗಾರರಿಗೆ ರೇಷ್ಮೆಗೂಡು ಧಾರಣೆ ಕುಸಿತವಾದಾಗ ಸರ್ಕಾರವು ಮಧ್ಯಪ್ರವೇಶಿಸಿ ಪ್ರೋತ್ಸಾಹಧನ ನೀಡಲು ರಾಮನಗರ ಮಾರುಕಟ್ಟೆಯಲ್ಲಿ ರೂ.447.07 ಲಕ್ಷಗಳ ಬಿಡುಗಡೆಯಾದ ಅನುದಾನದಲ್ಲಿ ಪ್ರೋತ್ಸಾಹಧನ ವಿತರಿಸಿ ಉಳಿಕೆ ಇದ್ದ ರೂ.200 ಲಕ್ಷಗಳನ್ನು ರೇಷ್ಮೆ ಬೆಳೆಗಾರರ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ವಿನಿಯೋಗಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪ್ರೋತ್ಸಾಹ ಧನಕ್ಕೆ ಮೀಸಲಿಟ್ಟ ಯಾವುದೇ |

| | | |
|---|---|---|
| | ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಎಷ್ಟು ಮೊತ್ತದ ಸರ್ಕಾರಿ ಹಣ ದುರುಪಯೋಗವಾಗಿರುತ್ತದೆ. (ವಿವರನೀಡುವುದು). | ಹಣವು ದುರುಪಯೋಗವಾಗಿರುವುದಿಲ್ಲ. ತಾತ್ಕಾಲಿಕವಾಗಿ ಬಳಸಿಕೊಂಡಿರುವ ರೂ.200 ಲಕ್ಷಗಳಲ್ಲಿ ರೂ.78,59,000/- ದಿನಾಂಕ:05.08.2021ರಂದು ಚೆಕ್ ಸಂಖ್ಯೆ:001227ರಲ್ಲಿ ಜಮೆ ಮಾಡಲಾಗಿದೆ. ಪ್ರಸ್ತುತ ರೂ.13,46,066/-ಗಳನ್ನು ವಸೂಲಿ ಮಾಡಿದ್ದು ಉಳಿಕೆ ಮೊತ್ತದ ವಸೂಲಾತಿಗೆ ಎಲ್ಲಾ ಕ್ರಮಗಳನ್ನು ವಹಿಸಲಾಗುತ್ತಿದೆ. ಶ್ರೀ ಮುನ್ನಿಬಸಯ್ಯ ಇವರು ದಿನಾಂಕ:24.05.2021ರಂದು ನೀಡಿರುವ ಹೇಳಿಕೆಯಲ್ಲಿ ರೂ.1,38,23,502/-ಗಳಿಗೆ ತಾವೇ ಜವಾಬ್ದಾರರಾಗಿರುವುದರಿಂದ ಸದರಿ ಮೊತ್ತವನ್ನು ಬ್ಯಾಂಕಿಗೆ ಜಮೆ ಮಾಡಲು ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ ಸದರಿ ಕೋರಿಕೆಯನ್ನು ಪರಿಶೀಲಿಸಿ ಸದರಿಯವರಿಂದ ಬಾಕಿ ಮೊತ್ತವನ್ನು ವಸೂಲು ಮಾಡಲು ಕ್ರಮವಹಿಸಲಾಗುತ್ತಿದೆ. |
| (ಇ) | ಈ ರೀತಿ ದುರುಪಯೋಗ ಪಡಿಸಿಕೊಂಡಿರುವ ಸರ್ಕಾರದ ಹಣವನ್ನು ತಪ್ಪಿತಸ್ಥ ಅಧಿಕಾರಿಗಳಿಂದ ವಸೂಲು ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಕ್ರಮಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ ಯಾವ ಕಾಲ ಮಿತಿಯೊಳಗೆ ಸರ್ಕಾರಕ್ಕೆ ಜಮಾ ಮಾಡಲಾಗುವುದು? (ವಿವರ ನೀಡುವುದು). | ರಾಮನಗರ ಮಾರುಕಟ್ಟೆಯಲ್ಲಿ, ಮಾರುಕಟ್ಟೆ ಅಧಿಕಾರಿಯಾಗಿದ್ದ ಶ್ರೀಜೆ.ಎಂ.ಮುನ್ನಿಬಸಯ್ಯ ರೇಷ್ಮೆ ಉಪ ನಿರ್ದೇಶಕರು ಇವರು ಕರ್ತವ್ಯಲೋಪ ಮತ್ತು ನಿರ್ಲಕ್ಷ್ಯತನವೆಸಗಿರುವ ಈ ತಪ್ಪಿತಸ್ಥ ಅಧಿಕಾರಿಯ ಮೇಲೆ ಐ.ಪಿ.ಸಿ. ಸೆಕ್ಷನ್ 204, 409,420, 201ರಡಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ ಮತ್ತು ಇಲಾಖಾ ಮಟ್ಟದಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆಯನ್ನು ನಡೆಸಲು ಹಾಗೂ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಪ್ರಕರಣವನ್ನು ವಹಿಸಲಾಗಿದೆ. |

**ರೇಷ್ಮೆ 79 ರೇಕ್ರೃವಿ 2023**

**(ಕೆ.ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**